# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

25 1994-2019 GROWTH DRIVEN BY PERFORMANCE

ಸಂಪುಟ : IV ಸಂಚಿಕೆ : 3 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಅಕ್ಟೋಬರ್-ಡಿಸೆಂಬರ್ 2018




ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

ಸಂಘದ ಎಲ್ಲಾ ನಿರ್ದೇಶಕರುಗಳಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರುಗಳಿಗೆ ಮತ್ತು ಸದಸ್ಯರಿಗೆ ಹಾಗೂ ಎಲ್ಲಾ ಶಾಖಾಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ 2019ರ ನವವರ್ಷದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತಾ, ಸಂಘವು ಪ್ರಸ್ತುತ ಸಾಲಿನಲ್ಲಿ, ಡಿಸೆಂಬರ್ 31ರವರೆಗೆ ಸಾಧಿಸಿದ ಪ್ರಗತಿಗೆ ಸರ್ವ ರೀತಿಯ ಸಹಕಾರವನ್ನು ನೀಡಿದ ತಮ್ಮೆಲ್ಲರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತಾ, 2018-19ನೇ ಸಾಲಿನ 3ನೇ ತ್ರೈಮಾಸಿಕ ಅವಧಿ ಅಂತ್ಯ ದಿನಾಂಕ 31.12.2018ಕ್ಕೆ ಸಂಘವು ಉತ್ತಮ ಪ್ರಗತಿಯನ್ನು ಸಾಧಿಸಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

## ಪ್ರಗತಿಯ ಪಕ್ಷಿನೋಟ

(Rs. In Crores)

| | | 31.12.2017 | 31.12.2018 | Increase over 31.12.2017 |
|---|---|---|---|---|
| Aggregate Deposit | | 152 | 183 | 31 |
| Aggregate Advance | | 122 | 148 | 26 |
| Total Business | | 274 | 331 | 57 |
| NPA | Absolute (in lakhs) | 37 | 35 | - |
| | Percentage to Gross NPA | 0.30% | 0.24% | - |
| Profit (In Crores) | | 2.91 | 3.04 | 0.13 |

*** 31.12.2018ಕ್ಕೆ ಸಂಘದ ಪ್ರಗತಿ ವಿವರ :**

ದಿನಾಂಕ 31.12.2018ಕ್ಕೆ ಸಂಘದ ಠೇವಣಾತಿಯು ರೂ.183 ಕೋಟಿಯಾಗಿ, ಸಾಲ ಮತ್ತು ಮುಂಗಡ ರೂ.148 ಕೋಟಿಯಷ್ಟಾಗಿರುತ್ತದೆ. ಸಂಘವು 31.12.2018ಕ್ಕೆ ರೂ.3.04 ಕೋಟಿ ನಿವ್ವಳ ಲಾಭ ಗಳಿಸಿರುವುದಲ್ಲದೆ, ಅನುತ್ಪಾದಕ ಆಸ್ತಿಯು ಶೂನ್ಯ ಪ್ರಮಾಣದಲ್ಲಿರುತ್ತದೆ. ಒಟ್ಟು ವ್ಯವಹಾರವು ರೂ.331 ಕೋಟಿಯನ್ನು ಮೀರಿರುತ್ತದೆ.

*** ಹಿಂದಿನ ಸಾಲಿನ 2017 ಡಿಸೆಂಬರ್‌ಗೆ 2018ರ ಡಿಸೆಂಬರ್‌ನ ವ್ಯವಹಾರ ಹೋಲಿಕೆ :**

ಡಿಸೆಂಬರ್ 2018ರ ಈ ಪ್ರಗತಿಯನ್ನು ಹಿಂದಿನ ಸಾಲಿನ 2017 ಡಿಸೆಂಬರ್‌ಗೆ ಹೋಲಿಸಿದರೆ, ಠೇವಣಾತಿಯಲ್ಲಿ ರೂ.31 ಕೋಟಿ ಹೆಚ್ಚಳ, ಸಾಲ ಮತ್ತು ಮುಂಗಡದಲ್ಲಿ ರೂ.26 ಕೋಟಿಯಷ್ಟು ಏರಿಕೆ, ಒಟ್ಟು ವ್ಯವಹಾರವು ರೂ.57 ಕೋಟಿ ವೃದ್ಧಿಗೊಂಡು, ನಿವ್ವಳ ಲಾಭ ಗಳಿಕೆಯು ಕೂಡ, ರೂ.13 ಲಕ್ಷದಷ್ಟು ಏರಿಕೆ ಕಂಡು, 31.12.2017ಕ್ಕೆ 0.30% ಇದ್ದ ಅನುತ್ಪಾದಕ ಆಸ್ತಿಯು 31.12.2018ಕ್ಕೆ 0.24% ಇಳಿದು ತನ್ನಎಲ್ಲಾ ಕಾರ್ಯವೈಖರಿಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದೆ.

*** ಪ್ರಸ್ತುತ ಸಾಲು 2018-19ರ 01.04.2018ರಿಂದ 31.12.2018ರ 9 ತಿಂಗಳ ಅವಧಿಯಲ್ಲಿ ಒಟ್ಟು ವ್ಯವಹಾರದಲ್ಲಿ ಅಮೂಲಾಗ್ರ ಪ್ರಗತಿ :**

ಮಾರ್ಚ್ 2018ರ ವರ್ಷಾಂತ್ಯಕ್ಕೆ, ಡಿಸೆಂಬರ್ 2018ರ ವ್ಯವಹಾರವನ್ನು ಹೋಲಿಸಿದಾಗ, ಮಾರ್ಚ್ 2018ರಲ್ಲಿ ರೂ.288 ಕೋಟಿ ಇದ್ದ ಒಟ್ಟು ವ್ಯವಹಾರವು ರೂ.43 ಕೋಟಿಯಷ್ಟು ಹೆಚ್ಚಳಗೊಂಡು ಇದೀಗ 31.12.2018ಕ್ಕೆ ರೂ.331 ಕೋಟಿ ವೃದ್ಧಿಯಾಗಿ ಉತ್ತಮ ಪ್ರಗತಿಯನ್ನು ಕಂಡಿದೆ. ಈ ಅವಧಿಯಲ್ಲಿ ಸಂಘವು ತನ್ನ ಲಾಭ ಗಳಿಕಾ ಸಾಮರ್ಥ್ಯವನ್ನು ವೃದ್ಧಿಸಿಕೊಂಡು 31.12.2018ಕ್ಕೆ ರೂ.3.04 ಕೋಟಿ ನಿವ್ವಳ ಲಾಭವನ್ನು ಹೊಂದಿದೆ.

*** ದಿನಾಂಕ 31.12.2018ಕ್ಕೆ ಶಾಖೆಗಳ ಗುರಿ ಸಾಧನೆ ಬಗ್ಗೆ**

2018-19ನೇ ಸಾಲಿನ 3ನೇ ತ್ರೈಮಾಸಿಕ ಅವಧಿ 31.12.2018ಕ್ಕೆ, ಸಂಘದ ಬಿಲಿಂಬಿ, ಸುರತ್ಕಲ್, ವೆಲೆನ್ಸಿಯಾ, ಉಪ್ಪಿನಂಗಡಿ ಮತ್ತು ತೊಕ್ಕೊಟ್ಟು ಶಾಖೆಗಳು ನಿಗದಿತ ಮುಖ್ಯ ಗುರಿಗಳಾದ ಠೇವಣಾತಿ, ಸಾಲ, ಎನ್.ಪಿ.ಎ. ಮತ್ತು ನಿವ್ವಳ ಲಾಭದ ಗುರಿಗಳನ್ನು ಸಾಧಿಸಿ ಅತ್ಯುತ್ತಮ ನಿರ್ವಹಣೆಯನ್ನು ತೋರಿದ್ದಾರೆ. ಈ ಶಾಖೆಗಳಿಗೆ ವಿಶೇಷ ಅಭಿನಂದನೆಗಳು. ಈ ಅವಧಿಯಲ್ಲಿ ಹೆಚ್ಚಿನ ಶಾಖೆಗಳು ಉತ್ತಮ ಪ್ರಗತಿಯನ್ನು ಹೊಂದಿದೆ. ಮುಂಬರುವ ವರ್ಷಾಂತ್ಯ 31.03.2019ಕ್ಕೆ ನಿಗದಿತಎಲ್ಲಾ ಗುರಿಗಳನ್ನು ಸಾಧಿಸಲು ಈಗಿನಿಂದಲೇ ಮುತುವರ್ಜಿ ವಹಿಸಬೇಕೆಂದು ಎಲ್ಲಾ ಶಾಖೆಗಳಲ್ಲಿ ಅಪೇಕ್ಷಿಸುತ್ತೇನೆ.

ತಮ್ಮೆಲ್ಲರ ಇದೇ ರೀತಿಯ ಸಹಕಾರದಿಂದ 2018-19ರ ವರ್ಷಾಂತ್ಯ ದಿನಾಂಕ 31.03.2019ಕ್ಕೆ ಸಂಘವು ಎಲ್ಲಾ ನಿಗದಿತ ಗುರಿಗಳನ್ನು ಮೀರಿದ ಸಾಧನೆಯನ್ನು ಮಾಡುವುದೆಂಬ ದೃಢ ವಿಶ್ವಾಸವನ್ನು ಹೊಂದಿರುತ್ತೇನೆ.

**ಕೆ. ಜೈರಾಜ್ ಬಿ. ರೈ,** ಅಧ್ಯಕ್ಷರು

## ಸಹಾಯಧನ ಹಸ್ತಾಂತರ



ಸಂಘದ ವತಿಯಿಂದ ದಿನಾಂಕ 07.11.2018ರಂದು ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಯ ನೆರೆಹಾವಳಿ ಬಾಬ್ತು **"ಮುಖ್ಯ ಮಂತ್ರಿ ಪರಿಹಾರ ನಿಧಿ"**ಗೆ ಸಹಾಯಧನದ ಚೆಕ್ಕನ್ನು ಸಂಘದ ಅಧ್ಯಕ್ಷರು ದ.ಕ. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಬಿ.ಕೆ. ಸಲೀಂರವರಿಗೆ ಹಸ್ತಾಂತರಿಸಿದರು.

## ಸಹಕಾರ ಶಿಕ್ಷಣ ನಿಧಿಯ ಚೆಕ್ ಹಸ್ತಾಂತರ



2017–18ನೇ ಸಾಲಿನ ಏನ್–ಲಾಭದಲ್ಲಿ ಸಹಕಾರಿ ಶಿಕ್ಷಣ ನಿಧಿಗೆ ತೆಗೆದಿರಿಸಲಾದ ₹ 7,06,465/– (ರೂಪಾಯಿ ಏಳು ಲಕ್ಷದ ಆರು ಸಾವಿರದ ನಾಲ್ಕು ನೂರ ಅರವತ್ತೈದು ಮಾತ್ರ)ವನ್ನು ಕರ್ನಾಟಕ ರಾಜ್ಯ ಕೋ–ಓಪರೇಟಿವ್ ಫೆಡರೇಶನ್ ಇವರ ಹೆಸರಿಗೆ ಬರೆಯಲಾದ ಚೆಕ್ಕನ್ನು ಸಂಘದ ಅಧ್ಯಕ್ಷರು ದ.ಕ. ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಿಗೆ ಹಸ್ತಾಂತರಿಸಿದರು.

## 65ನೇ ಅಖಿಲ ಭಾರತ ಸಹಕಾರಿ ಸಪ್ತಾಹ



65ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಸಮಾರೋಪ ಸಮಾರಂಭದ ಅಂಗವಾಗಿ ದಿನಾಂಕ 20.11.2018ರಂದು ನಮ್ಮ ಸಂಘದ ಕೇಂದ್ರ ಕಛೇರಿಯ ವಠಾರದಿಂದ ಎಸ್‌ಸಿಡಿಸಿಸಿ ಬ್ಯಾಂಕ್ ಕೊಡಿಯಾಲ್ ಬೈಲ್‌ವರೆಗೆ ಜರಗಿದ "ಸಹಕಾರಿ ನಡಿಗೆ" ಕಾರ್ಯಕ್ರಮವನ್ನು ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷರಾದ ಶ್ರೀ ಅಜಿತ್‌ಕುಮಾರ್ ರೈ ಮಾಲಾಡಿ ಯವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ 450 ರಷ್ಟು ವಿವಿಧ ಸಹಕಾರಿ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದರು.

## ಸನ್ಮಾನ



ಸಮಾಜ ಸೇವೆಗಾಗಿ ಪ್ರತಿಷ್ಠಿತ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ಉಡುಪಿ ಶಾಖಾ ಸಲಹಾ ಸಮಿತಿ ಅಧ್ಯಕ್ಷ ಶ್ರೀ ಮನೋಹರ ಶೆಟ್ಟಿ ಮತ್ತು ರಾಜ್ಯ ಮಟ್ಟದ "ಶ್ರೇಷ್ಠ ಸಹಕಾರಿ" ಪ್ರಶಸ್ತಿ ಪಡೆದ ಬಂಟರ ಯಾನೆ ನಾಡವರ ಮಾತೃ ಸಂಘ ಇದರ ಉಡುಪಿ ತಾಲೂಕು ಸಮಿತಿ ಸಂಚಾಲಕ ಶ್ರೀ ಜಯಕರ ಶೆಟ್ಟಿ ಇಂದ್ರಾಳಿಯ ವರನ್ನು, ಸಂಘದ ಅಧ್ಯಕ್ಷರು ದಿನಾಂಕ 11.12.2018ರಂದು ಜರಗಿದ ಉಡುಪಿ ಶಾಖೆಯ ಗ್ರಾಹಕ ಸಂಪರ್ಕ ಸಭೆಯಲ್ಲಿ ಸನ್ಮಾನಿಸಿದರು.

# ಶಾಖೆಗಳಲ್ಲಿ ಗ್ರಾಹಕ ಸಂಪರ್ಕ ಸಭೆ

ಗ್ರಾಹಕರೊಂದಿಗೆ ಉತ್ತಮ ಸೌಹಾರ್ದತೆ ಸಂವಹನೆಯ ವೃದ್ಧಿ, ವಿಚಾರ ವಿನಿಮಯಕ್ಕೆ ಸಹಕಾರಿಯಾಗುವಂತೆ, ಶಾಖೆಗಳ ಸ್ಥಾಪನಾ ದಿನದಂಗವಾಗಿ ಆಯಾಯ ಶಾಖೆಗಳಲ್ಲಿ 2018–19ನೇ ಸಾಲಿನಲ್ಲೂ ಗ್ರಾಹಕ ಸಂಪರ್ಕ ಸಭೆಯನ್ನು ಈ ಕೆಳಗಿನ ಶಾಖೆಗಳಲ್ಲಿ ಜರಗಿಸಲಾಗಿರುತ್ತದೆ.




ದಿನಾಂಕ 17.07.2018ರಂದು ಸುಳ್ಯ ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ



ದಿನಾಂಕ 24.08.2018ರಂದು ಕುಂದಾಪುರ ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ



ದಿನಾಂಕ 05.09.2018ರಂದು ಮೂಡಬಿದ್ರಿ ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ




ದಿನಾಂಕ 23.10.2018 ರಂದು ಹೆಬ್ರಿ ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ



ದಿನಾಂಕ 31.10.2018ರಂದು ತೊಕ್ಕೊಟ್ಟು ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ




ದಿನಾಂಕ 13.11.2018ರಂದು ಬೈಂದೂರು ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ




ದಿನಾಂಕ 15.11.2018 ರಂದು ಬಿ.ಸಿ.ರೋಡ್ ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ



ದಿನಾಂಕ 17.11.2018 ರಂದು ವಿಟ್ಲ ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ

## ದಿನಾಂಕ 21.12.2018 ರಂದು ಚಿಲಿಂಬಿ ಶಾಖೆಯಲ್ಲಿ ಜರಗಿದ ಗ್ರಾಹಕ ಸಂಪರ್ಕ ಸಭೆ




## ದಿನಾಂಕ 08.12.2018ರಂದು ಜರಗಿದ ಶಾಖಾ ವ್ಯವಸ್ಥಾಪಕರ ಸಭೆ



## ಅಭಿನಂದನೆಗಳು

- ✶ ಸಂಘದ ಬಿ.ಸಿ.ರೋಡ್ ಶಾಖೆಯ ಅಕೌಂಟೆಂಟ್ ಶ್ರೀಮತಿ ವೈಶಾಲಿ ರೈರವರ ಹೊಸ ಮನೆ "ರತ್ನ ಶ್ರೀನಿವಾಸ" ಇದರ ಗೃಹಪ್ರವೇಶವು ಇತ್ತೀಚೆಗೆ ಜರಗಿತು. ಶ್ರೀಮತಿ ವೈಶಾಲಿ ರೈರವರಿಗೆ ಹಾರ್ದಿಕ ಅಭಿನಂದನೆಗಳು.
- ✶ ಸಂಘದ ಬಿ.ಸಿ.ರೋಡ್ ಶಾಖೆಯ ಅಟೆಂಡರ್ ಶ್ರೀ ಹರೀಶ್ ಮೂಲ್ಯರವರ ವಿವಾಹವು ಚಿ।ಸೌ। ರಮ್ಯ ರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ✶ ಸಂಘದ ಮೂಡಬಿದ್ರಿ ಶಾಖೆಯ ವ್ಯವಸ್ಥಾಪಕ ಹುದ್ದೆಯಲ್ಲಿರುವ ಶ್ರೀ ನವೀನ್ ಕುಮಾರ್‌ರವರ ವಿವಾಹವು ಚಿ।ಸೌ। ಚೈತ್ರ ರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ✶ ಸಂಘದ ವಿಟ್ಲ ಶಾಖೆಯ ಕ್ಲರ್ಕ್ ಫ್ಲಾವಿಯಾ ಜೇನ್‌ರವರ ವಿವಾಹವು ಎಡ್ವರ್ಡ್ ಸಂತೋಷ್ ರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

## ಶ್ರದ್ಧಾಂಜಲಿ

? ನಮ್ಮ ಸಂಘದ ಮಂಗಳೂರು ಶಾಖೆಯ ಶ್ರೀ ರಾಮಕೃಷ್ಣ ನಿತ್ಯ ನಿಧಿ ಸಂಗ್ರಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಹರೀಶ್ಚಂದ್ರ ಶೆಟ್ಟಿಯವರು ದಿನಾಂಕ 01.11.2018 ರಂದು ದೈವಾಧೀನರಾಗಿರುವರು, ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿ ಕೋರಿಕೊಂಡು ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## Higher Diploma in Co-operative Management (HDCM) ಕೋರ್ಸ್ ತೇರ್ಗಡೆ ಹೊಂದಿದ ಸಿಬ್ಬಂದಿಗಳು

| ಸಿಬ್ಬಂದಿ ಹೆಸರು | ಹುದ್ದೆ | ಶಾಖೆ |
|---|---|---|
| ಶ್ರೀ ಮೋಹನ್‌ದಾಸ್ ಶೆಟ್ಟಿ | ಮುಖ್ಯ ವ್ಯವಸ್ಥಾಪಕರು | ಕೇಂದ್ರ ಕಛೇರಿ |
| ಶ್ರೀ ಮಹಾಬಲ ಶೆಟ್ಟಿ | ಹಿರಿಯ ವ್ಯವಸ್ಥಾಪಕ | ಬಿ.ಸಿ.ರೋಡ್ |
| ಶ್ರೀ ಕರುಣಾಕರ ಶೆಟ್ಟಿ | ಹಿರಿಯ ವ್ಯವಸ್ಥಾಪಕ | ಪುತ್ತೂರು |
| ಶ್ರೀ ಶ್ರೀಹರ್ಷ ಡಿ.ಎಸ್. | ವ್ಯವಸ್ಥಾಪಕ | ಉಪ್ಪಿನಂಗಡಿ |
| ಶ್ರೀ ದಿನೇಶ್ ರೈ ಜೆ.ಎನ್. | ವ್ಯವಸ್ಥಾಪಕ | ಸುಳ್ಯ |
| ಶ್ರೀಮತಿ ಮಮತಾ ಎಚ್. | ಅಕೌಂಟೆಂಟ್ | ಪುತ್ತೂರು |
| ಶ್ರೀ ರೋಹಿತ್ ಎಂ.ಜೆ. | ಅಕೌಂಟೆಂಟ್ | ಉಪ್ಪಿನಂಗಡಿ |

## ಹುಟ್ಟು ಹಬ್ಬದ ಶುಭಾಶಯಗಳು

### ಸಿಬ್ಬಂದಿಗಳ ಹೆಸರು ಮತ್ತು ಶಾಖೆ

| | |
|---|---|
| ಶ್ರೀಮತಿ ಹರಿಣಿ ರೈ ಬಿ., ಸುಳ್ಯ | ಶ್ರೀ ವಿನಯ ಕುಮಾರ್ ಶೆಟ್ಟಿ, ಹೆಬ್ರಿ |
| ಕು. ಸಪ್ತಮಿ ಎಸ್. ರೈ, ಪುತ್ತೂರು | ಶ್ರೀ ರೋಹಿತ್ ಎಂ.ಜೆ., ಉಪ್ಪಿನಂಗಡಿ |
| ಶ್ರೀಮತಿ ವೀಣಾ ಶೆಟ್ಟಿ, ವಿಟ್ಲ | ಕು. ರಮ್ಯ, ಬೈಂದೂರು |
| ಶ್ರೀ ಗೋಪಾಲಕೃಷ್ಣ ಪಿ., ತೊಕ್ಕೊಟ್ಟು | ಶ್ರೀ ರಮೇಶ್ ಕೆ., ಮುಲ್ಕಿ |
| ಶ್ರೀ ಧನಂಜಯ ಶೆಟ್ಟಿಗಾರ್, ಕುಂದಾಪುರ | ಶ್ರೀ ನವೀನ್ ಡಿ'ಸೋಜ, ತೊಕ್ಕೊಟ್ಟು |
| ಕು. ರಾಧಿಕ ಎಂ., ಸುಳ್ಯ | ಶ್ರೀ ಪಾಂಡುರಂಗ ನ್ಯಾಕ್, ಹೆಬ್ರಿ |
| ಶ್ರೀ ಹರೀಶ್, ಕೇಂದ್ರ ಕಛೇರಿ | ಶ್ರೀ ನಿತೇಶ್‌ಕುಮಾರ್, ಮಂಗಳೂರು |

Private Circulation only

BOOK-POST

To,

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.